# ಕರ್ನಾಟಕ ಸರ್ಕಾರ
# GOVERNMENT OF KARNATAKA

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು) ರವರ ಕಛೇರಿ
Office of
Principal Chief Conservator of Forests
(Head of Forest Force)

ಅರಣ್ಯಭವನ, 18ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು-560 003
AranyaBhavan, 18th Cross,
Malleshwaram, Bengaluru-560 003
Telephone : 080 2334 6472
Email : apccffc@gmail.com

Old File No: A5(2).QRY.CR-08/2019-20
E-office File No. KFD/HOFF/A5-2(QRY)/22/2019-FC

**E-188480**
Date 08-08-2023

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಬಳ್ಳಾರಿ ವೃತ್ತ ಬಳ್ಳಾರಿ

**Sub:** Diversion of 10.0956 hectare of forest land in Sy No.1/A and 1/D of Ucchangidurga Village, Arasikere Hobli, Harapanahalli Taluk, Davanagere District for establishing M-Sand Quarry and its Approach Road in favour of M/s ANNAPOORNA STONE CRUSHER*(a Partnership Firm of Sri T. Basappa s/o T. Sidappa, Smt M.C. Poornima w/o Sri T.Basappa and Sri B.Nikhil, s/o Sri T.Basappa, #1120, 3rd Cross, Taralabalu Extension, Davanagere)*, Sy No.1D, Ucchangidurga Village, Harapanahalli Taluk, Davanagere District.
**Proposal No. FP/KA/QRY/43207/2019**

**Ref:** ನಿರ್ದೇಶಕರು ಗಣಿ ಮತ್ತು ಭೂವಿಜ್ಞಾನ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ ಗಭೂಇ/ಉ.ನಿ(ಎಂಸ್ಯಾಂಡ್/ಕಗಗುಅಸ-100 & 101& 3230 ದಿನಾಂಕ17-07-2023

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದ ಪ್ರತಿಯನ್ನು ಈ ಪತ್ರಕ್ಕೆ ಲಗತ್ತಿಸಿ ಕಳುಹಿಸುತ್ತಾ, ಸದರಿ ಪತ್ರದಲ್ಲಿ ಸೂಚಿಸಿರುವ ಅಂಶಗಳ ಕುರಿತು ನಿಯಮಾನುಸಾರ ಪರಿಶೀಲಿಸಿ ನಿಮ್ಮ ಸ್ಪಷ್ಟ ಅಭಿಪ್ರಾಯ/ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಸಂರಕ್ಷಣೆ ) ಮತ್ತು ನೋಡಲ್ ಅಧಿಕಾರಿ

1. ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ದಾವಣಗೆರೆ ವಿಭಾಗ ದಾವಣಗೆರೆ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಪ್ರತಿಯನ್ನು ಮೆ: ಅನ್ನಪೂರ್ಣ ಸ್ಟೋನ್ ಕ್ರಶರ್ ಪ್ರೊ: ಟಿ. ಬಸಪ್ಪ, ಡೋರ್ ನಂ 1120, .3ನೇ ಕ್ರಾಸ್, ತರಳಬಾಳು ಎಕ್ಸಟೆನ್ಷನ್ ದಾವಣಗೆರೆ-577005 ಇವರಿಗೆ ಮಾಹಿತಿ ಕಳುಹಿಸಿದೆ.

**ಕರ್ನಾಟಕ ಸರ್ಕಾರ**

ಸಂಖ್ಯೆ:ಗಭೂವಿ/ಉ.ನಿ(ವಿ.ಕ)/ಎಂ-ಸ್ಯಾಂಡ್/ಕಗಗುಅನ-100 & 101 & 103/2017/2023-24 3230

ನಿರ್ದೇಶಕರ ಕಛೇರಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ನಂ.49, ಖನಿಜ ಭವನ, ಆರ್.ಸಿ.ರಸ್ತೆ,
ಬೆಂಗಳೂರು-01, ದಿನಾಂಕ: - 07-2023

17 JUL 2023

**ಇವರಿಗೆ,**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಪಡೆ ಮುಖ್ಯಸ್ಥರು)
ಅರಣ್ಯ ಭವನ, 18ನೇ ಅಡ್ಡ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560 003.

**ಮಾನ್ಯರೇ,**

**ವಿಷಯ:** ಮೆ.ಅನ್ನಪೂರ್ಣಸ್ಟೋನ್ ಕ್ರಷರ್ ಪ್ರೊ.ಟಿ.ಬಸಪ್ಪ ರವರಿಗೆ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ಗ್ರಾಮದ ಸರ್ವೆ ನಂ.1/A ಮತ್ತು 1/D ರಲ್ಲಿನ ಅರಣ್ಯ ಪ್ರದೇಶದಲ್ಲಿ ಕಟ್ಟಡ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗಾಗಿ ಅರಣ್ಯ ತೀರುವಳಿ (Forest Clearance) ನೀಡಲು ಅಭಿಪ್ರಾಯ ಕೋರಿರುವ ಕುರಿತು.

**ಉಲ್ಲೇಖ:**
1. ನಿಮ್ಮ ಕಛೇರಿ E-office File No: KFD/HOFF/A5-2(QRY)/22/ 2019-FC ದಿನಾಂಕ: 08-05-2023.
2. ಅರ್ಜಿದಾರರ ಮನವಿ ಪತ್ರ ದಿನಾಂಕ: 06-07-2023.

*****

ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರವು ದಿ:12-08-2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2016ನ್ನು ಜಾರಿಗೆ ತಂದಿರುತ್ತದೆ. ಸದರಿ ತಿದ್ದುಪಡಿ ನಿಯಮಗಳ ಪ್ರಕಾರ ಸರ್ಕಾರಿ ಜಮೀನುಗಳಲ್ಲಿ ಉಪಖನಿಜ ಗಣಿ ಗುತ್ತಿಗೆಗಳನ್ನು ಹರಾಜು ಮೂಲಕವೇ ಮಂಜೂರು ಮಾಡಬೇಕಾಗಿರುತ್ತದೆ. ಆದಾಗ್ಯೂ ರಾಜ್ಯದಲ್ಲಿ ಎಂ-ಸ್ಯಾಂಡ್ ಉತ್ಪಾದನೆಯನ್ನು ಹೆಚ್ಚಿಸಲು ನಿಯಮ-31-ZC ರ ವಿಶೇಷ ನಿಯಮದಲ್ಲಿ ಈ ದಿನಾಂಕದ ಪೂರ್ವದಲ್ಲಿ ಎಂ-ಸ್ಯಾಂಡ್ ಸ್ಟೋನ್ ಕ್ರಷರ್ ಘಟಕ ಹೊಂದಿರುವವರಿಗೆ ಹರಾಜು ರಹಿತವಾಗಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ, ಮೆ.ಅನ್ನಪೂರ್ಣಸ್ಟೋನ್ ಕ್ರಷರ್ ಪ್ರೊ.ಟಿ.ಬಸಪ್ಪ ರವರು ದಿ:12-08-2016ರ ಪೂರ್ವದಲ್ಲಿ ಉಚ್ಚಂಗಿದುರ್ಗ ಗ್ರಾಮದ ಸರ್ವೆ ನಂ.1/D ರಲ್ಲಿ ದಿ:25-11-2015 ರಿಂದ 200 TPH ಸಾಮರ್ಥ್ಯದ ಎಂ-ಸ್ಯಾಂಡ್ ಸ್ಟೋನ್ ಕ್ರಷರ್ ಘಟಕವನ್ನು ಸ್ಥಾಪಿಸಿ ಲೈಸೆನ್ಸ್ (ನಮೂನೆ-ಸಿ) ಪಡೆದಿರುತ್ತಾರೆ. ಸದರಿಯವರು

ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು-2016ರ ನಿಯಮ-31-ZC ರಂತೆ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ಗ್ರಾಮದ ಸರ್ವೆ ನಂ.1/A ಮತ್ತು 1/D ರಲ್ಲಿನ ಅರಣ್ಯ ಪ್ರದೇಶದಲ್ಲಿ ಕಟ್ಟಡ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗಾಗಿ ಈ ಕೆಳಕಂಡಂತೆ ಅರ್ಜಿ ಸಲ್ಲಿಸಿರುತ್ತಾರೆ.

ಅನುಬಂಧ

| ಕ್ರ. ಸಂ. | ಅರ್ಜಿ ಸಂಖ್ಯೆ | ದಿನಾಂಕ | ತಾಲ್ಲೂಕು | ಗ್ರಾಮ & ಸರ್ವೆ ನಂ. | ವಿಸ್ತೀರ್ಣ (ಎಕರೆ/ಸೆಂಟ್ಸ್) |
|---|---|---|---|---|---|
| 1 | 100/2016-17 | 10-11-2016 | ಹರಪನಹಳ್ಳಿ | ಉಚ್ಚಂಗಿದುರ್ಗ,1/D | 5-70 |
| 2 | 101/2016-17 | 10-11-2016 | ಹರಪನಹಳ್ಳಿ | ಉಚ್ಚಂಗಿದುರ್ಗ,1/A | 10-55 |
| 3 | 102/2016-17 | 10-11-2016 | ಹರಪನಹಳ್ಳಿ | ಉಚ್ಚಂಗಿದುರ್ಗ,1/D | 8-34 |

ಮೇಲೆ ತಿಳಿಸಿರುವ ಅರ್ಜಿಗಳ ಪ್ರದೇಶವು ಅರಣ್ಯ ಇಲಾಖೆ ಒಡೆತನದ ಜಮೀನುಗಳಾಗಿದ್ದು, ಸದರಿ ಜಮೀನುಗಳಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಪಡೆಯಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994 ರ ನಿಯಮ-8(2) ರಂತೆ ಅರಣ್ಯ ಇಲಾಖೆ ತೀರುವಳಿ ಪತ್ರ ಸಲ್ಲಿಸಬೇಕಾಗಿರುತ್ತದೆ. ಅದರಂತೆ, ಮೆ.ಅನ್ನಪೂರ್ಣಸ್ಟೋನ್ ಕ್ರಷರ್ ಪ್ರೊ.ಟಿ.ಬಸಪ್ಪ ರವರು ಕಲ್ಲುಗಣಿ ಗುತ್ತಿಗೆ ಮಂಜೂರಾತಿ ಸಂಬಂಧ ಪರಿಶೀಲಿಸಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994 ರ ನಿಯಮ-8(2) ರಂತೆ ಅರಣ್ಯ ತೀರುವಳಿ ಪತ್ರ ಪಡೆದು ಸಲ್ಲಿಸಲು ಸೂಚಿಸಲಾಗಿರುತ್ತದೆ.

ಅನುಬಂಧದಲ್ಲಿ ವಿವರಿಸಿರುವ ಅರ್ಜಿಗಳ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡುವ ಸಂಬಂಧ ಜಿಲ್ಲಾಧಿಕಾರಿ, ದಾವಣಗೆರೆ ರವರ ಕಾರ್ಯಾಲಯದಿಂದ ದಿ:20-12-2017 ಮತ್ತು ದಿ:26-06-2018 ರಂದು ಕಂದಾಯ ಇಲಾಖೆಯಿಂದ ನೀಡಿರುವ ಅಭಿಪ್ರಾಯದ ವರದಿಯನ್ನು ಅರ್ಜಿದಾರರು ಉಲ್ಲೇಖ-02ರ ಮನವಿ ಪತ್ರದಲ್ಲಿ ಸಲ್ಲಿಸಿರುತ್ತಾರೆ. ವಿವರ ಕೆಳಕಂಡಂತಿದೆ;

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಉಚ್ಚಂಗಿದುರ್ಗ ಗ್ರಾಮದ ಸರ್ವೆ ನಂ.1/D ರ 5 ಎಕರೆ 70 ಸೆಂಟ್ಸ್ ಮತ್ತು ಸರ್ವೆ ನಂ.1/A ರಲ್ಲಿನ ಪ್ರದೇಶವು ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದ್ದು, ಕಲ್ಲುಬಂಡೆಯಿಂದ ಕೂಡಿರುತ್ತದೆ. ಸದರಿ ಜಮೀನು ವಲಯ ಅರಣ್ಯಾಧಿಕಾರಿಗಳ ವ್ಯಾಪ್ತಿಗೆ ಬರುತ್ತದೆ. ಪ್ರಯುಕ್ತ ಎರಡೂ ಜಮೀನುಗಳು ಅರಣ್ಯ ಇಲಾಖೆಗೆ ಸಂಬಂಧಿಸಿರುತ್ತದೆ. ಪ್ರಸ್ತಾಪಿತ ಜಮೀನುಗಳಲ್ಲಿ ಯಾವುದೇ ಬೆಲೆಬಾಳುವ ಗಿಡಮರಗಳು, ಯಾವುದೇ ಪುರಾತನ ಕಾಲದ ಕಟ್ಟಡಗಳು, ಸ್ಮಾರಕಗಳು, ಹೈಟೆನ್ಷನ್ ವಿದ್ಯುತ್ ತಂತಿಗಳು ಇರುವುದಿಲ್ಲ. ಯಾವುದೇ ನಮೂನೆ 50, 53 ರಡಿಯಲ್ಲಿ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. ಎರಡೂ ಜಮೀನುಗಳು ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿರುತ್ತವೆ. ಸದರಿ ಜಮೀನುಗಳು ಅರಣ್ಯ ಇಲಾಖೆಯ ವ್ಯಾಪ್ತಿಗೆ ಸೇರಿರುವುದರಿಂದ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಬಹುದಾಗಿರುತ್ತದೆ ಎಂಬುದಾಗಿ ಅಭಿಪ್ರಾಯ ಸಲ್ಲಿಸಿರುತ್ತಾರೆ.

ಬುಜ್ಜಂಗಿದುರ್ಗ ಗ್ರಾಮದ ಸರ್ವೆ ನಂ. 1/D ರಲ್ಲಿನ ವಿಸ್ತೀರ್ಣ 8ಎಕರೆ 34 ಸೆಂಟ್ಸ್ ಪ್ರದೇಶದ ಕುರಿತು ಸದರಿ ಜಮೀನು ಅರಣ್ಯ ಇಲಾಖೆ ವ್ಯಾಪ್ತಿಗೆ ಸೇರಿರುವುದರಿಂದ, ಅರಣ್ಯ ಇಲಾಖೆಯಿಂದ ನಿರಾಕ್ಷೇಪಣೆ ಪತ್ರವನ್ನು ಪಡೆಯಬೇಕಾಗಿರುತ್ತದೆ ಎಂಬುದಾಗಿ ಅಭಿಪ್ರಾಯ ಸಲ್ಲಿಸಿರುತ್ತಾರೆ.

ಆದ್ದರಿಂದ, ಮೇಲೆ ತಿಳಿಸಿರುವ ಅಂಶಗಳಂತೆ ಮೆ.ಅನ್ನಪೂರ್ಣಸ್ಟೋನ್ ಕ್ರಷರ್ ಪ್ರೊ.ಟಿ.ಬಸಪ್ಪ ರವರಿಗೆ ಅನುಬಂಧದಲ್ಲಿ ವಿವರಿಸಿರುವ ಪ್ರದೇಶಗಳಲ್ಲಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿಗೆ ಅರಣ್ಯ ಇಲಾಖೆ ತೀರುವಳಿ ನೀಡಲು ಕ್ರಮವಹಿಸಬಹುದಾಗಿದ್ದು, ಸದರಿ ಮಾಹಿತಿಯನ್ನು ತಮ್ಮ ಅವಗಾಹನೆ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ

ನಿರ್ದೇಶಕರು